**ಎಮ್.ವಿ.ಸಿ. ನಂಃ203/2024**
**ಪಿ .ಡಬ್ಲ್ಯೂಃ1,**

**ದಿನಾಂಕ : 21-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು :- ಶ್ರೀ . ಎ.ಎಮ್. ವಾಯ. ಎದುರುದಾರ ಪರ ವಕೀಲರಿಂದ :**

ನಾನು 8ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಕಲಿತಿರುತ್ತೇನೆ. ಕೆ.ಎ-32-ಎಚ್.ಎ.-09-41 ಬೈಕ ನನ್ನ ಮಾವ ಕಿರಣ ತಂದೆ ಬಸಪ್ಪ, ಮಾಲಗತ್ತಿ ಇವರ ಹೆಸರಿನಲ್ಲಿದೆ. ಸದರಿ ಬೈಕ ಸ್ಕೂಟಿ ಬೈಕ ಇರುತ್ತದೆ. ನನ್ನ ಮಾವನ ಬೈಕನ ಆರ್.ಡಿ. ಪರಮಿಟ್ ಮತ್ತು ಪಿಟನೆಸ್, ವಿಮೆ, ಪ್ರಮಾಣ ಪತ್ರಗಳು ಇವೆ. ನಾನು ಬೈಕ ವಿತ್ ಗೇರ ಮತ್ತು ವಿತೌಟ ಗೇರ ಬೈಕಗಳನ್ನು ನಡೆಸುತ್ತೇನೆ. ನನ್ನ ಬಳಿ ಬೈಕ ಚಲಾಯಿಸಲು ಲೈಸನ್ಸ ಇದೆ. ನನ್ನ ಲೈಸನ್ಸ ನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲಾ. ನಮ್ಮ ಮನೆಯಲ್ಲಿ ಲೈಸನ್ಸ ಇದೆ ಅದು ಕಳೆದು ಹೋಗಿದೆ. ನನ್ನ ಲೈಸನ್ಸ ಕಳೆದ ಬಗ್ಗೆ ದೂರು ನೀಡಿಲ್ಲಾ. ದ್ವಿಪ್ರತಿ ಸಲುವಾಗಿ ಅರ್ಜಿಯನ್ನು ಸಲ್ಲಿಸಿಲ್ಲಾ. ನಾನು ಲೈಸನ್ಸ ಬೆಂಗಳೂರು ಕಮಲಾನಗರ ಆರ್.ಟಿ.ಓ. ಬಳಿ ಪಡೆದುಕೊಂಡಿದ್ದೇನೆ. ಜ್ಯೋತಿ ಪೆಟ್ರೋಲಿಯಂ ಪಂಪದಿಂದ ಮಾಲಗತ್ತಿ ಊರು 2 ರಿಂದ 3 ಕಿ.ಮೀ ಅಂತದಲ್ಲಿದೆ. ಜ್ಯೋತಿ ಪೆಟ್ರೋಲಿಯಂ ಪಂಪದಿಂದ ಮಾಲಗತ್ತಿ ಊರು ತನಕ ಡಬಲ್ ರೋಡ ಇದ್ದು ಅದು ರಾಷ್ಟ್ರೀಯ ಹೆದ್ದಾರಿ ಇದೆ ಎಂದರೆ ಸರಿ.

ಸಾಮಾನ್ಯವಾಗಿ ಮುಂದೆ ಹೋಗುವ ವಾಹನಕ್ಕಿಂತ 22 ರಿಂದ 25 ಅಡಿ ಅಂತರ ಇರಬೇಕು ಎಂದರೆ ಸರಿ. ನಾವು ಚಲಾಯಿಸುವ ವಾಹನದ ಬ್ರೇಕ್ ಸಾಮರ್ಥ್ಯ, ವಾಹನ ಇಂಜಿನ ಪವರ್ ಸಾಮರ್ಥ್ಯದ ಮೇಲೆ ನಾವು ನೋಡಿಕೊಂಡು ವಾಹನ ಚಲಾಯಿಸಬೇಕು ಎಂದರೆ ಸರಿ. ಕೆ.ಎ-32-ಎಚ್.ಎ.-09-41 ಬೈಕನ ಬ್ರೈಕ್, ಹೆಟ್ ಲೈಟ್ ಸರಿ ಇರುತ್ತದೆ.

ಎಮ್.ವಿ.ಸಿ. ನಂಃ203/2024
ಪಿ .ಡಬ್ಲ್ಯೂಃ1,

ಮುಂದೆ ಹೋಗುವ ವಾಹನ ಬ್ರೇಕ್ ಹಾಕಿದ ಮೇಲೆ ಅದನ್ನು ನೋಡಿ ನಾವು ನಮ್ಮ ವಾಹನದ ಬ್ರೇಕ ಹಾಕಬೇಕು ಎಂದರೆ ಸರಿ. ಮುಂದೆ ಹೋಗುವ ಲಾರಿ ನಂಬರ ಗೊತ್ತಿಲ್ಲ. ಮುಂದೆ ಹೋಗವ ಲಾರಿಯ ಬ್ರೇಕ್ ಮತ್ತು ಇಂಡಿಕೇಟರ್ ಸುಸ್ಥಿತಿಯಲ್ಲಿದ್ದವು ಎಂದರೆ ಸರಿಯಲ್ಲ . ಲಾರಿ ಚಾಲಕ ಮುಂದೆ ಹೋಗುವ ಸಮಯದಲ್ಲಿ ರೇಯರ್ ಕನ್ನಡಿಯಲ್ಲಿ ನೋಡುತ್ತಾನೆ, ಹಿಂಬದಿ ನೋಡುವುದಿಲ್ಲಾ ಎಂದರೆ ಸರಿ. ಮಾಲಗತ್ತಿ ಒಳಗೆ ಅರ್ಧ ಕಿ.ಮೀ. ಒಳಗೆ ಅಪಘಾತ ಆಗಿದೆ. ರಾ.ಹೆ. ಯಿಂದ ಮಾಲಗತ್ತಿ ಊರು ಅರ್ಧ ಕಿ.ಮೀ. ಒಳಗೆ ಇದೆ. ಮಾಲಗತ್ತಿ ಊರಿಗೆ ಹೋಗಬೇಕಾದರೆ ರಾ.ಹ. ಯ ಎರಡು ಬದಿಯಲ್ಲಿ ರೋಡ ಬ್ರೇಕ್ ಇವೆ ಎಂದರೆ ಸರಿ. ಎಲ್ಲಾ ವಾಹನಗಳು ರೋಡ್ ಬ್ರೇಕ್ ಇದ್ದ ಕಾರಣ ಅಲ್ಲಿ ನಿಧಾನವಾಗಿ ಚಲಾಯಿಸುತ್ತೇವೆ ಎಂದರೆ ಸರಿ. ಮಾಲಗತ್ತಿ ಊರ ಬಳಿ ರೋಡ ಬ್ರೇಕ ಇದ್ದು ನಮ್ಮ ಅಪಘಾತವು ಅರ್ಧ ಕಿ.ಮೀ. ದೂರದಲ್ಲಿ ಆಗಿದ್ದು ಯಾವುದೇ ವಾಹನ ಅರ್ಧ ಕಿ.ಮೀ. ದೂರ ಇದ್ದಲ್ಲಿ ರೋಡ ಬ್ರೇಕ್ ನೋಡಿ ಎಲ್ಲರು ನಿಧಾನವಾಗಿ ವಾಹನ ಚಲಾಯಿಸುತ್ತಾರೆ ಎಂದರೆ ಸರಿಯಲ್ಲ. ನಮ್ಮ ವಾಹನ ಲಾರಿಯ ಹಿಂದಿನ ಮಧ್ಯದಲ್ಲಿ ಹೋಗಿ ಗುದ್ದಿದೆ. ನನ್ನ ಕೈ-ಕಾಲು ಗಟ್ಟಿ ಇದ್ದು ನಾನು ದುಡಿಯಲು ಹೋಗುಬಹುದು ಎಂದರೆ ಸರಿಯಲ್ಲ. ನನಗೆ ಚಿಕಿತ್ಸೆ ಮಾಡಿ ವೈದ್ಯರು ಮನೆಯಲ್ಲಿ ಕುಳಿತು ತಿನ್ನಲು ತಿಳಿಸಿರುವುದಿಲ್ಲ ಮತ್ತು ಕೆಲಸಕ್ಕೆ ಹೋಗು ಎಂದು ಪ್ರಮಾಣ ಪತ್ರ ನೀಡಿಲ್ಲ ಎಂದರೆ ಸರಿ. ನಾನು ಪೆಟ್ರೋಲ ಪಂಪದಲ್ಲಿ ಕೆಲಸ ಮಾಡುತ್ತೇನೆ ಎಂದು ಯಾವುದೇ ಪ್ರಮಾಣ ಪತ್ರ ಸಲ್ಲಿಸಿಲ್ಲಾ.

**ಎಮ್.ವಿ.ಸಿ. ನಂಃ203/2024**
**ಪಿ .ಡಬ್ಲ್ಯೂಃ1,**

ನಾನು ಪರಿಹಾರ ಕೇಳಿ ಸಲ್ಲಿಸಿದ ಅರ್ಜಿ ಓದಿ ತಿಳಿದುಕೊಂಡು ಸಲ್ಲಿಸಿದ್ದೇನೆ ಮತ್ತು ನನ್ನ ಸಾಕ್ಷಿ ಪ್ರಮಾಣ ಪತ್ರ ಓದಿ ತಿಳಿದುಕೊಂಡು ಸಲ್ಲಿಸಿದ್ದೇನೆ. ನನಗೆ ತಿಂಗಳಿಗೆ ರೂ. 20,000/- ಸಂಬಳ ಇತ್ತು. ನಾನು ತಿಂಗಳಿಗೆ ರೂ.20,000/- ಸಂಬಳ ಇತ್ತು ಎಂದು ಯಾವುದೇ ದಾಖಲೆ ಸಲ್ಲಿಸಿಲ್ಲಾ. ನನಗೆ ತಿಂಗಳಿಗೆ ರೂ.20,000/- ಸಂಬಳ ಇತ್ತು ಮತ್ತು ನಾನು ಜ್ಯೋತಿ ಪೆಟ್ರೋಲಿಯಂ ಕೆಲಸ ಮಾಡುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ನಾನು ಊಟ, ತಿಂಡಿ ಮಾಡುತ್ತೇನೆ. ನಾನು ಅಪಾಘತ ಆದ ನಂತರ ಈಗ ಆರಾಮ ವಾಗಿ ಇದ್ದೇನೆ ಎಂದರೆ ಸಾಕ್ಷಿ ಅಪಘಾತ ಆದ ನಂಥರ ನನ್ನ ಕಣ್ಣು ಮಂಜ ಮಂಜ ಕಾಣುತ್ತಿದ್ದು, ಊಟ ಮಾಡುವಾಗ ಬಾಯಿ ನೂಯಿತ್ತದೆ. ಅಪಘಾತ ಆದ ನಂತರ ನನ್ನ ಕಣ್ಣ ಮಂಜು ಕಾಣುತ್ತದೆ ಮತ್ತು ಊಟು ಮಾಡುವಾಗ ತೊಂದರೆ ಆಗುತ್ತಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ನನ್ನ ವಾಹನದಿಂದ ನಾನೇ ಬಿದ್ದು, ಗಾಯ ಪಡಿಸಿಕೊಂಡಿದ್ದು, ನಾನು ಪರಿಹಾರ ಪಡೆಯುವ ದುರದ್ದೇಶದಿಂಧ ಎ.ಪಿ.-02-ಟಿ.ಎಚ್. 1685 ಲಾರಿ ಮೇಲೆ ಸುಳ್ಳು ದೂರು ಸಲ್ಲಿಸಿ, ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**